# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂವೈಎಸ್-416/16/ಎಆರ್‌ಇ-7

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ:08/12/2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (1)ರ ಅನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ.ಮಹದೇವ ನಾಯಕ ಬಿನ್ ತಮ್ಮಯ್ಯ ನಾಯಕ, ಪರವಾನಿಗೆ ಸರ್ವೇಯರ್, ಭೂಮಾಪನ ಶಾಖೆ, ಪುತ್ತೂರು ತಾಲ್ಲೂಕು, ದ.ಕ.ಜಿಲ್ಲೆ ರವರು ಸಾರ್ವಜನಿಕ ನೌಕರರಾಗಿದ್ದು ದುರ್ವರ್ತನೆಯಿಂದ ನಡೆದುಕೊಂಡಿದ್ದುದರ ನಡವಳಿಕೆ - ಕುರಿತು.

****

ಬೆಂಗಳೂರಿನಲ್ಲಿರುವ ಕರ್ನಾಟಕ ಲೋಕಾಯುಕ್ತ ಅಪರ ಪೊಲೀಸ್ ಮಹಾನಿರ್ದೇಶಕರು ತಮ್ಮ ಪತ್ರದೊಂದಿಗೆ ಮಂಗಳೂರಿನ ಕರ್ನಾಟಕ ಲೋಕಾಯುಕ್ತ ಪೊಲೀಸ್ ನಿರೀಕ್ಷಕರ (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ, ಶ್ರೀ.ಮಹದೇವ ನಾಯಕ ಬಿನ್ ತಮ್ಮಯ್ಯ ನಾಯಕ, ಪರವಾನಿಗೆ ಸರ್ವೇಯರ್, ಭೂಮಾಪನ ಶಾಖೆ, ಪುತ್ತೂರು ತಾಲ್ಲೂಕು, ದ.ಕ.ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಸಾರ್ವಜನಿಕ ನೌಕರರಾಗಿ, ಕು.ಅಂಕಿತ ಜಿ ಬಿನ್ ಕಿಟ್ಟಣ್ಣಗೌಡ, ಗೆಣಸಿನಕುಮೇರು ಮನೆ, ಆರ್ಯಾಪು ಗ್ರಾಮ, ಪುತ್ತೂರು ತಾಲ್ಲೂಕು, ದ.ಕ.ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ಕೆಲಸದ ಸಂಬಂಧ ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ವರದಿಯಲ್ಲಿ ತಿಳಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ಎದುರುದಾರರ ವಿರುದ್ಧ ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಲಾಗಿದೆ.

2) *ಪ್ರಕರಣದ ಸಂಕ್ಷಿಪ್ತ ಸಾರಾಂಶ:-*

(ಅ) ***ದೂರುದಾರರಂತೆ:-*** ದೂರುದಾರರ ತಂದೆಯವರಾದ ಶ್ರೀ.ಕೃಷ್ಣಪ್ಪ @ ಕಿಟ್ಟಣ್ಣರವರಕು ಅವರಿಗೆ ಸೇರಿದ ಆರ್ಯಾಪು ಗ್ರಾಮ ಸ.ನಂ.123*2ಬಿ(ಪಿ11), ಪಿ2, 123*2ಬಿ (ಪಿ11)ಪಿ1 ಮತ್ತು 123*(4ಪಿ11)ಕ್ಕೆ ಸಂಬಂಧಿಸಿದಂತೆ ಜಮೀನನ್ನು ಅಳತೆ ಮಾಡಿ, ನಕ್ಷೆ ತಯಾರಿಸಿ ಕೊಡುವಂತೆ ದೂರುದಾರರ ತಂದೆಯ ಹೆಸರಿನಲ್ಲಿ ದಿ:13-12-2013 ರಂದು ಅರ್ಜಿಯನ್ನು ತಹಸೀಲ್ದಾರ್ ಕಚೇರಿ ಪುತ್ತೂರು ರವರಿಗೆ ಸರ್ಕಾರಿ ಶುಲ್ಕದೊಂದಿಗೆ ಸಲ್ಲಿಸಿದ್ದರು.

(ಆ) ಈ ಕುರಿತಂತೆ ಜನವರಿ ತಿಂಗಳಿನಲ್ಲಿ ಎದುರುದಾರರು ಜಮೀನನ್ನು ಅಳತೆ ಮಾಡಿದ್ದು, ಆ ಸಮಯದಲ್ಲಿ ರೂ.1,000/- ಪಡೆದುಕೊಂಡು, ಕಚೇರಿಗೆ ಬರಲು ಹೇಳಿದಂತೆ ದೂರುದಾರರ ತಂದೆ ಕಛೇರಿಗೆ ಹೋದಾಗ ರೂ.6,000/- ಲಂಚದ ಹಣಕ್ಕೆ ಎದುರುದಾರರು ಬೇಡಿಕೆ ಸಲ್ಲಿಸಿರುತ್ತಾರೆ.

(ಇ) ಆ ಸಮಯ ಅವರಲ್ಲಿ ಹಣ ಇಲ್ಲದ ಕಾರಣ, ಹಣ ತೆಗೆದುಕೊಂಡು ಬರುವುದಾಗಿ ವಾಪಸ್ಸು ಬಂದಿರುತ್ತಾರೆ. ದಿ:12-3-2014 ರಂದು ದೂರುದಾರರು ತನ್ನ ತಾಯಿಯ ಮೊಬೈಲ್ ನಂ.9481377273 ರಿಂದ ಎದುರುದಾರರ ಮೊಬೈಲ್ ನಂ.9880178927ಕ್ಕೆ ಫೋನ್ ಮಾಡಿ ತನ್ನ ತಂದೆಯವರಲ್ಲಿ ರೂ.6,000/- ಕೇಳಿದ ಬಗ್ಗೆ ವಿಚಾರಿಸಿದಾಗ, "ನಿಮ್ಮ ದಾಖಲಾತಿಗಳು ಸರಿ ಇದೆ, ರೂ.6,000/- ಬೇಡ, ನಿಮಗೆ ಎಷ್ಟು ಆಗುತ್ತೆ ಅಷ್ಟು ಕೊಡಿ" ಎಂದು ಎದುರುದಾರರು ಹೇಳಿರುತ್ತಾರೆ. ಸದರಿ ಧ್ವನಿಯನ್ನು ದೂರುದಾರರು ಧ್ವನಿ ಮುದ್ರಿಸಿಕೊಂಡಿರುತ್ತಾರೆ.

(ಈ) ತದನಂತರ, ಎದುರುದಾರರಿಗೆ ಲಂಚ ಕೊಡಲು ಇಷ್ಟವಿಲ್ಲದ ಕಾರಣ, ದೂರುದಾರರು ದಿ:15-03-2014 ರಂದು ಮಂಗಳೂರು ಜಿಲ್ಲೆ ಲೋಕಾಯುಕ್ತ ಕಚೇರಿಯಲ್ಲಿ ಹಾಜರಾಗಿ ಎದುರುದಾರರ ವಿರುದ್ಧ ದೂರನ್ನು ನೀಡಿರುತ್ತಾರೆ.

(ಉ) ಸದರಿ ದಿನ ಎದುರುದಾರರು, ದೂರುದಾರರಿಗೆ ಮೊಬೈಲ್‌ನಲ್ಲಿ "ನಾನು ಬೇರೆ ಕಡೆ ಹೋಗಿರುವೆ, ನಿಮಗೆ ನಾನೇ ಫೋನ್ ಮಾಡಿ ತಿಳಿಸುವೆ, ಈಗ ಬರುವುದು ಬೇಡ" ಎಂದು ತಿಳಿಸಿರುತ್ತಾರೆ. ಅಲ್ಲದೆ, ದಿ:18-3-2014 ರಂದು

ಎದುರುದಾರರು, ದೂರುದಾರರಿಗೆ ದೂರವಾಣಿ ಕರೆ ಮಾಡಿ "ನಿಮ್ಮ ಜಮೀನಿಗೆ ಸಂಬಂಧಿಸಿದ ಆರ್.ಟಿ.ಸಿ. ರೆಡಿಯಾಗಿದ್ದು, ಅದನ್ನು ಪಡೆದುಕೊಂಡು ಹೋಗಿ, ನಾನು ನಿಮಗೇನು ಇಂತಿಷ್ಟೇ ಹಣ ಕೊಡಬೇಕೆಂದು ಒತ್ತಾಯಪಡಿಸಿಲ್ಲ, ನನಗೆ ಯಾವುದೇ ಹಣ ಬೇಡ, ನಿಮ್ಮ ಕೆಲಸ ಆಗಿರುತ್ತದೆ" ಎಂದು ತಿಳಿಸಿರುತ್ತಾರೆ.

(ಊ) ನಂತರ ಎದುರುದಾರರು, ಅವರು ಸಲ್ಲಿಸಿದ ಬೇಡಿಕೆಯಂತೆ ಹಣ ಪಡೆದುಕೊಂಡಿರುವುದಿಲ್ಲ. ಆದರೆ, ಎದುರುದಾರರು, ದೂರುದಾರರಿಗೆ ತಮ್ಮ ಕೆಲಸ ಮಾಡಿದ ಕುರಿತಂತೆ ಹಣಕ್ಕೆ ಬೇಡಿಕೆ ಸಲ್ಲಿಸಿರುವುದು ತನಿಖೆಯಿಂದ ದೃಢಪಟ್ಟಿರುತ್ತದೆ.

(ಋ) ದೂರುದಾರರ, ಪಂಚರ ಹಾಗೂ ಇತರ ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ಸಂಬಂಧಿಸಿದ ದಾಖಲೆಗಳು ಪ್ರಕರಣದಲ್ಲಿ ಹಾಜರು ಮಾಡಿದ್ದು, ಅವು ಕೂಡ ಎದುರುದಾರರು ದುರ್ವರ್ತನೆ/ದುರ್ನಡತೆ ವೆಸಗಿರುವುದನ್ನು ತೋರಿಸುತ್ತವೆ.

3) ಆರೋಪ ಪಟ್ಟಿಯಲ್ಲಿ ಕಾಣಿಸಿರುವ ಸಂಗ್ರಹವಾದ ಆಧಾರಗಳಿಂದಾಗಿ 'ಎದುರುದಾರರು' ಅಧಿಕಾರ ಒಲವು ತೋರಲು ಲಂಚದ ಹಣಕ್ಕೆ ಒತ್ತಾಯ ಮಾಡಿ, ಮೇಲ್ನೋಟಕ್ಕೆ 'ಎದುರುದಾರರ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 'ಎದುರುದಾರರು' ಸರ್ಕಾರಿ ಸೇವಕರಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

4) ನಂತರ, ಎದುರುದಾರರಿಗೆ ವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ ಶಿಫಾರಸು ವರದಿ ಕಳುಹಿಸಬಾರದು? ಎಂಬ ಬಗ್ಗೆ ಕಾರಣಗಳನ್ನು ಕೇಳಲಾಯಿತು. 'ಎದುರುದಾರರು' ತನಿಖಾ ವರದಿಯಲ್ಲಿ ಕಾಣಿಸಿದ ಸಂಗತಿಗಳನ್ನು ನಿರಾಕರಿಸಿ, ತಾನು ದುರ್ನಡತೆ ಎಸಗಿಲ್ಲವೆಂದು, ತನ್ನ ವಿರುದ್ಧದ

ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿದ್ದಾರೆ. ಆದರೆ, ಎದುರುದಾರರು ಆಕ್ಷೇಪಣೆಯಲ್ಲಿ ನೀಡಿರುವ ಕಾರಣಗಳು ಸೂಕ್ತ ಅಥವಾ ಸಮಾಧಾನಕಾರಕ ವಾಗಿರುವುದಿಲ್ಲ.

5) ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, 'ಎದುರುದಾರರು' ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದೆ. ಆದರೆ ಎದುರುದಾರರು ಪರವಾನಗಿ ಭೂಮಾಪಕರು ಆಗಿರುವ ಕಾರಣ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರಡಿಯಲ್ಲಿ ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರಡಿ ಪ್ರದತ್ತವಾದ ಅಧಿಕಾರದ ಅಡಿಯಲ್ಲಿ ಎದುರುದಾರರಿಗೆ ಸರ್ಕಾರವು ಕೊಟ್ಟಿರುವ ಪರವಾನಗಿಯನ್ನು ರದ್ದುಪಡಿಸಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ **ಮೂರು ತಿಂಗಳ ಅವಧಿಯೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/12/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**